The Hon'ble Sri H. C. DASAPPA.—I cannot say. There are a good many of them. Hand-loom Weaving, manufacture of Tiles and Bricks, Oil Rotaries, etc., there are quite a good number of these industries. Then, there is the working advances for running these cottage industries.

ಶ್ರೀ ಎಸ್. ರಂಗರಾವ್ ಯ್ಯನವರು —ಗ್ರಾಮಾಂತರಗಳಿಂದ ಬರುವ ಅರ್ಜಿಗಳನ್ನು ಉದಾರವಾಗಿ ಪರಿಶೀಲಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಉತ್ತರ ಆಗಲೇ ಹೇಳಿದೆ. ಅದು ತಮ್ಮ ಸಮಿತಿಯ ಕೈಲೇ ಇದೆ. ನಮ್ಮ ಉದಾರ ನೀತಿ ಅದಕೆ ಬೇಕಾಗಿಲ್ಲ.

Acquisition of lands in Mysore South for location of factories.

Q.—281. **Sri T. C. HONNAPPA** (Mysore District—General).—

Will the Government be pleased to state.—

(*a*) whether steps have been taken by the Mysore City Improvement Trust Board to acquire the lands required for the sites to locate factories in Mysore South area ;

(*b*) if not, when they are going to take them :

(*c*) whether it has come to their notice that the existing two Match Factories are experiencing trouble from the Municipality in connection with the renewal of their licences ;

A.—**The Hon'ble Sri H. C. DASAPPA** (Minister for Finance and Industries).—

(*a*) Yes. An estimate for Rs. 8,90,210 has been sanctioned in April 1951, for the formation of an Industrial Suburb in Mysore South and steps are being taken by the City Improvement Trust Board, Mysore, to acquire the lands required for the purpose.

(*b*) *Vide* answer to (*a*).

(*c*) No.

ಶ್ರೀ ಟಿ. ಸಿ. ಹೊನ್ನಪ್ಪನವರು.—(ಎ) ಪ್ರಶ್ನೆಗೆ ಉತ್ತರವಾಗಿ ಅಕ್ವಿಜಿಷನ್ ಕ್ರಮ ನಡೆಯುತ್ತಿದೆಯೆಂದು ಹೇಳಿದ್ದೀರಿ. ಎಷ್ಟು ದಿವಸದಲ್ಲಿ ಅಲ್ಲಿನ ಕೈಗಾರಿಕೆಗಳಿಗೆ ಸೈಟನ್ನು ಒದಗಿಸುತ್ತೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇನ್ನೂ ಅಕ್ವೈರ್‌ಮಾಡುವುದೇ ಪೂರ್ತಿಸಿಲ್ಲದಿರುವಾಗ ಹೇಗೆ ಅದನ್ನು ಹೇಳುವುದು? ಅಕ್ವೈರ್ ಆದಮೇಲೆ ಲೇಔಟ್ ಮಾಡಿ ಸೈಟನ್ನು ಮಾಡಿ ಒದಗಿಸಬಹುದು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಸುಮಾರು ಇಷ್ಟು ದಿವಸಬೇಕು ಎಂದು ಹೇಳುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಗ್ಯಾರಂಟಿ ಕೊಡುವುದಕ್ಕಾಗುವುದಿಲ್ಲ. ಸುಮಾರು ಮೂರು ತಿಂಗಳಲ್ಲಿ ಸರ್ಕಾರ ಬದಲಾವಣೆಯಾಗುವಾಗ ಅದನ್ನು ಗ್ಯಾರಂಟಿಮಾಡುವುದಕ್ಕೆ ಸ್ವಲ್ಪ ಹೆಚ್ಚಿನ ಧೈರ್ಯಬೇಕು. ಮುಂದೆ ಬರುವವರು ಯಾವ ನೀತಿಯನ್ನನುಸರಿಸುತ್ತಾರೋ ನಾವು ಹೇಗೆ ಹೇಳುವುದು? ಅವರೂ ಇದೇ ನೀತಿಯನ್ನು ಅನುಸರಿಸಿದರೆ ಜಾಗ್ರತೆ ಆಗುತ್ತದೆಯೆಂದು ಹೇಳಬಹುದು.

ಶ್ರೀ ಟಿ. ಸಿ. ಹೊನ್ನಪ್ಪನವರು.—(ಸಿ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ದೀಪದಕಡ್ಡಿ ಕಾರ್ಖಾನೆಗಳಿಗೆ ಮುನಿಸಿಪಾಲಿಟಿಯಿಂದ ತೊಂದರೆಯಿಲ್ಲ ಎಂದು ಹೇಳಿದೆ. ಮೈಸೂರಿನ ಜಯನಗರದಲ್ಲಿರುವ ಸೌತ್ ಪ್ರದೇಶದ ದೀಪದಕಡ್ಡಿ ಕಾರ್ಖಾನೆಗೆ ಮುನಿಸಿಪಾಲಿಟಿಯವರು ಲೈಸೆನ್ಸು ರಿನ್ಯೂ ಮಾಡದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

The Hon'ble Sri H. C. DASAPPA.—Some of these factories experience some troubles because of certain difficulties.

ಇದು ನಮ್ಮ ಗಮನಕ್ಕೆ ಬಂದಿಲ್ಲ. ಈಗ ತಾವು ಹೇಳಿದ್ದೀರಿ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆ ವಿಚಾರದಲ್ಲಿ ಕೇಸು ಆಗಿದ್ದರೂ ತಮಗೆ ಗೊತ್ತಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅನ್ಯಾಯವಾಗಿದೆಯೆಂದು ಗೊತ್ತಾದರೆ ವಿಚಾರಮಾಡಿ ಪರಿಹಾರ ಕಲ್ಪಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ವಿಚಾರ ಮಾಡೋಣ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಒಂದು ಕೈಗಾರಿಕೆಯನ್ನು ಇರುವ ಜಾಗದಿಂದ ಬೇರೆ ಕಡೆಗೆ ವರ್ಗಾಯಿಸಬೇಕೆಂದು ಹೇಳಿದರೆ ಅದಕ್ಕೆ ಬೇರೆ ಸೈಟನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಸರ್ವೇಸಾಧಾರಣವಾಗಿ ಸೈಟು ಕೊಡುವ ನೀತಿಗೆ ಸಂಬಂಧಪಟ್ಟಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆ ತರಹ ತೊಂದರೆಯೇನಾದರೂ ದೀಪದಕಡ್ಡಿ ಕಾರ್ಖಾನೆಗೆ ಇದ್ದರೆ ಅದಕ್ಕೆ ತಕ್ಕ ಪರಿಹಾರವನ್ನು ಕಲ್ಪಿಸಿಕೊಡುತ್ತೀರಾ?

ಅಧ್ಯಕ್ಷರು.—ವಿಚಾರ ಮಾಡೋಣ ಎಂದು ಹೇಳಿದ್ದಾರೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ನಾಮನಿರ್ದೇಶನ).—ದೀಪದಕಡ್ಡಿ ಕಾರ್ಖಾನೆಯು ಜನರು ವಾಸಮಾಡುವ ಜಾಗದಲ್ಲಿ ಮಧ್ಯಪ್ರದೇಶದಲ್ಲಿರುವುದರಿಂದ ಆ ಪ್ರದೇಶದ ಜನರಿಂದ ದೂರು ಬಂದಿದೆ. ಅದನ್ನು ಪರಿಶೀಲಿಸಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆ ರೀತಿ ಯಾರೂ ದೂರುಕೊಟ್ಟಿರಲಾರರು. ಇನ್ನೂ ಕೆಲವು ಕೈಗಾರಿಕೆಗಳು ಅದೇ ಜಾಗದಲ್ಲಿವೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ದೂರು ನಮಗೆ ಬಂದಿದೆ. ಆ ಕಾರ್ಖಾನೆಯ ಅಕ್ಕ ಪಕ್ಕದ ಮನೆಯವರ ತಕರಾರಿದೆ. ಆದ್ದರಿಂದ ತನಿಖೆ ಯಾಗಬೇಕು.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—8 ಲಕ್ಷ ಚಿಲ್ಲರೆ ರೂಪಾಯಿಗಳ ಅಂದಾಜನ್ನು ಮಂಜೂರುಮಾಡರಾಗಿದೆಯೆಂದು ಉತ್ತರದಲ್ಲಿ ಹೇಳಿದೆ. ಹಾಗಾದರೆ ಎಷ್ಟು ಎಕರೆ ಜಮೀನು ಅಕ್ವೈರ್ ಆಗ ಬೇಕು?

The Hon'ble Sri H. C. DASAPPA.—I cannot say exactly what the break-up value of these 8 lakhs is. If you give notice, I will let you know.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಇಂಡಸ್ಟ್ರಿಯಲ್ ಸಬರ್ಬ್ ಮಾಡಬೇಕೆಂದಿರುವುದು ಮಾನಂದವಾಡಿ ರಸ್ತೆ ಆಚೆಗೆ ತಾನೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಅದಕ್ಕೆ ಜಮೀನು ಅಕ್ವೈರ್ ಮಾಡಿಕೊಳ್ಳಲು ಖರ್ಚು ಎಷ್ಟಾಗುತ್ತದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಷ್ಟೇ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಒಟ್ಟು ಎಲ್ಲಾ ನೇರಿಸಿ ಯೋಜನೆ ತಯಾರುಮಾಡಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಮೈಸೂರು ಪಟ್ಟಣದ ಉತ್ತರ ಭಾಗದಲ್ಲಿ ರೈಸ್‌ಮಿಲ್ ಮುಂತಾದ ಕೆಲವು ಕೈಗಾರಿಕೆಗಳು ನಡೆಯುತ್ತಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಸಾಲದಿರುವುದರಿಂದ ಈಗಿನ ನವೀನ ಕ್ರಮಗಳಿಗನುಸಾರವಾಗಿ ಒಳ್ಳೆಯ ಇಂಡಸ್ಟ್ರಿಯಲ್ ಸಬರ್ಬ್ ಮೈಸೂರಿನಲ್ಲಿ ಮಾಡಬೇಕೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು —ಹಾಗಾದರೆ ಉತ್ತರದ ಕಡೆ ಇರುವುದನ್ನು ಅಲ್ಲಗೆ ವರ್ಗಾಯಿಸಬೇಕೆಂಬ ನಿರ್ಬಂಧವಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೇನೂ ಇರುವುದಾಗಿ ಕಾಣುವುದಿಲ್ಲ. ಸಿಟಿ ಪ್ರದೇಶದಲ್ಲಿರುವುದನ್ನು ಸಬರ್ಬ್‌ಗೆ ಹಾಕಿದರೆ ಅಲ್ಲಿನ ನಿವಾಸಿಗಳಿಗೆ ಅನುಕೂಲವಾಗಬಹುದು.

Supply of Irrigation Pump sets for Kodihalli and surrounding villages.

Q.—53. Sri S. KARIAPPA (Bangalore District—General).—

Will the Government be pleased to state.—

(*a*) whether there are a number of applications from Kodihalli and its surrounding villages for irrigation pump sets;

(*b*), the action taken in the matter?

A.—The Hon'ble Sri K. T. BHASHYAM (Minister for Law and Labour).—

(*a*) Four applications have been received for supply of Diesel Oil Pumping Sets; Sixteen persons have applied for power for Irrigation pumping sets.

(*b*) One applicant has been supplied with Diesel Oil Pumping Set. Solvency Certificates regarding the others have not been received.

Regarding supply of power, an estimate amounting to Rs. 1,79,300 for electrification of Kodihalli has been re-submitted to Government for sanction. This includes power supply to sixteen Irrigation Pumping Sets. It is under consideration of Government.

ಶ್ರೀ ಎಸ್. ಕರಿಯಪ್ಪನವರು.—ಕೇವಲ 16 ಮಂದಿ ಮಾತ್ರ ವಿದ್ಯುಚ್ಛಕ್ತಿ ಪಂಪಿಂಗ್ ಸೆಟ್ಟು ಕೇಳಿದರೆಂದು ಉತ್ತರ ಕೊಟ್ಟಿದೆ. ಈಚೆಗೆ ಇನ್ನೂ ಕೆಲವರು ಕೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಸಾಲ್ವೆನ್ಸಿ ಸರ್ಟಿಫಿಕೇಟುಗಳು ಬಂದಿಲ್ಲವೆಂದು ಉತ್ತರದಲ್ಲಿ ಹೇಳಿದೆ, ಅದು ಬಾರದಿರುವುದು ರೈತ ತೆಗೆದುಕೊಳ್ಳುವುದಕ್ಕೆ ಅಡ್ಡಿಯಾಗಿದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಸಾಲ್ವೆನ್ಸಿ ಸರ್ಟಿಫಿಕೇಟು ಬಂದ ಕೂಡಲೆ ರೈತ ತೆಗೆದುಕೊಳ್ಳಲಾಗುವುದೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಸರ್ಟಿಫಿಕೇಟು ಬಂದಮೇಲೆ ಪಂಪಿಂಗ್ ಸೆಟ್ಟು ಒದಗಿಸುತ್ತೇವೆ. Hire Purchase system ನಲ್ಲಿ ಕೇಳಿರುವುದರಿಂದ ಅವರಿಗೆ ಹಣವನ್ನು ಕೊಡುವುದಕ್ಕೆ ಶಕ್ತಿಯಿದೆಯೋ, ಇಲ್ಲವೋ ತಿಳಿಯದು. ಅದನ್ನು ಜಿಲ್ಲಾಧಿಕಾರಿಗಳು ವಿಚಾರ ಮಾಡಿ ಹಣ ಕೊಡಬಹುದು ಎಂದು ಸಾಲ್ವೆನ್ಸಿ ಸರ್ಟಿಫಿಕೇಟ್ ಕೊಟ್ಟರೆ, ಆದರ ಮೇಲೆ ನಾವು ಪಂಪಿಂಗ್ ಸೆಟ್ಟು ಒದಗಿಸುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ಪವರ್ ರೈತ ಹಾಕಿದ ಮೇಲೆ ಪಂಪಿಂಗ್ ಸೆಟ್ ಕೊಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಈಗ ಹೇಳಿದುದು ಡೈಸೆಲ್ ಆಯಿಲ್ ಪಂಪಿಂಗ್ ಸೆಟ್ ವಿಚಾರ. ಪವರ್ ರೈತಿಗೂ ಇದಕ್ಕೂ ಸಂಬಂಧವಿಲ್ಲ. ಪವರ್ ಕೊಟ್ಟ ಮೇಲೆ electric pumping set ಬೇಕೆಂದು ಕೇಳಿದರೆ ಅದಕ್ಕೆ ಸಂಬಂಧಪಟ್ಟ ಸರ್ಟಿಫಿಕೇಟ್ ಪ್ರಶ್ನೆ ಬರುತ್ತದೆ. ಈಗ ನಾಲ್ಕು ಜನರು ಡೈಸೆಲ್ ಆಯಿಲ್ ಪಂಪಿಂಗ್ ಸೆಟ್ಟುಗಳನ್ನು ಕೇಳಿದ್ದರು. ಒಬ್ಬರಿಗೆ ಕೊಟ್ಟಿದೆ. ಬಾಕಿಯವರಿಂದ ಸಾಲ್ವೆನ್ಸಿ ಸರ್ಟಿಫಿಕೇಟುಗಳು ಬಂದ ಕೂಡಲೆ ಅವರಿಗೂ ಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—"ನೀರಾವರಿ ಪಂಪಿಂಗ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು 16 ಮಂದಿ ಅರ್ಜಿ ಹಾಕಿಕೊಂಡಿದ್ದಾರೆ" ಎಂದು ಉತ್ತರದಲ್ಲಿ ಹೇಳಿದೆ. ಅದಕ್ಕೆ ತಾನೆ ಸಾಲ್ವೆನ್ಸಿ ಸರ್ಟಿಫಿಕೇಟು ಕೇಳಿರುವುದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎಲ್ಲಿ ನಾಲ್ಕು ಜನರು 'ಡೈಸೆಲ್ ಆಯಿಲ್' ಪಂಪಿಂಗ್ ಸೆಟ್ಟುಗಳನ್ನು ಕೇಳಿದ್ದರು. ಅವರಲ್ಲಿ ಒಬ್ಬರು ಸಾಲ್ವೆನ್ಸಿ ಸರ್ಟಿಫಿಕೇಟು ಕೊಟ್ಟರು. ಅವರಿಗೆ ಸಪ್ಲೈ ಮಾಡಿದೆ. ಉಳಿದ ಮೂರು ಜನರಿಂದ ಸರ್ಟಿಫಿಕೇಟ್ ಬರಲಿಲ್ಲವಾದ್ದರಿಂದ ಅವರಿಗೆ ಸಪ್ಲೈ ಮಾಡಿಲ್ಲ. ಪವರ್ ಸಪ್ಲೈ 16 ಜನರು ಕೇಳಿದ್ದಾರೆ. ರೈತ ಹಾಕಿದ ಮೇಲೆ ಅಪ್ರೈ ಬರುತ್ತದೆ.

ಶ್ರೀ ಎಸ್. ಕರಿಯಪ್ಪನವರು.—ರೈತ ಹಾಕುವುದು ಯಾವಾಗ?